ST ಯೊಳಗೆ ಸೇರ್ಪಡೆ ಮಾಡುವುದಕ್ಕೆ proposal ಕಳುಹಿಸಬೇಕೆಂದು ವಿನಂತಿಯನ್ನು ನಾನು ಮಾಡುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದಿಖಾನೆ ಸಚಿವರು) : – ಸನ್ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಜಾತಿಗಳನ್ನು ಸೇರ್ಪಡೆ ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಕೇಂದ್ರ ಸರ್ಕಾರಕ್ಕೆ ಮಾತ್ರ ಅಧಿಕಾರವಿದೆ. ನಮ್ಮ ಮಾನ್ಯ ಶ್ರೀಕಾಂತ್ ಸುಬ್ರಾವ್ ಕುಲಕರ್ಣಿಯವರು ಹಾಗೂ ಮಾನ್ಯ ಸಿದ್ದು ಸವದಿಯವರು ಹೇಳಿದ ವಿಚಾರವನ್ನು ನಾನು ಗಮನಿಸಿದ್ದೇವೆ. ಆದರೆ ರಾಜ್ಯದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸಂಬಂಧಿಸಿದಂತೆ ಒಂದು ಗಾಬರಿ ವಿಚಾರವೆಂದರೆ, ಸ್ವಾತಂತ್ರ್ಯ ಪೂರ್ವದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಕೇವಲ ಏಳು ಜಾತಿಗಳು ಮಾತ್ರ ಸೇರ್ಪಡೆಯಾಗಿತ್ತು. ತದನಂತರ, ರಾಜಕಾರಣದ ಒತ್ತಡಗಳಿಂದ ಇವತ್ತು 100+50=151 ಜಾತಿ ಸೇರ್ಪಡೆಯಾಗಿದೆ. ಅಸ್ಪೃಶ್ಯರು ಮಾತ್ರ ಪರಿಶಿಷ್ಟ ಜಾತಿಯಲ್ಲಿ ಇರಬೇಕೆನ್ನುವುದು ಈ ರಾಜ್ಯದ ಜನತೆ ಅಪೇಕ್ಷೆಯಾಗಿದೆ. ಆ ಒಂದು ವಿಚಾರದಲ್ಲಿ ರಾಜ್ಯದಲ್ಲಿ ಸಾಕಷ್ಟು ಚರ್ಚೆ ಆಗಬೇಕಾಗಿದೆ ಹಾಗೂ ರಾಷ್ಟ್ರದಲ್ಲಿ ಚರ್ಚೆ ಆಗಬೇಕಾಗಿದೆ. ಆದರೂ ಸಹ ಅವರ ಕೋರಿಕೆಯಂತೆ ಈ ಒಂದು ಸಮುದಾಯವನ್ನು ಪರಿಶಿಷ್ಟ ವರ್ಗಕ್ಕೆ economical survey report ಸೇರಿಸಲು ಅನ್ನು ತರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸುವಂಥ ಕೆಲಸವನ್ನು ನಾನು ಮಾಡುತ್ತೇನೆ.

6. ವಿಷಯ : ಉಪಹಾರ ಹೋಟೆಲ್‌ಗಳನ್ನು ರಾತ್ರಿ ವೇಳೆಯಲ್ಲಿ ತೆರೆಯುವ ಕುರಿತು.

ಶ್ರೀ ಆರ್. ರೋಷನ್ ಬೇಗ್ : – ಮಾನ್ಯ ಸಭಾಧ್ಯಕ್ಷರೆ, ರಾಜಧಾನಿ ಬೆಂಗಳೂರಿನಲ್ಲಿ ಬೇಕಾದಷ್ಟು ತಮಗೆ ಗೊತ್ತಿರುವ ಹಾಗೆ ಫೈಸ್ಟಾರ್ ಹೋಟೆಲ್‌ಗಳಿವೆ. ಬೆಂಗಳುರು ನಗರದಲ್ಲಿ Windsor Manner Hotel ಆಗಲಿ, ITC Garden Hotel ಆಗಲಿ ನೂರಾರು Five Star, 4 Star Hotel ಗಳಿವೆ, ರಾತ್ರಿ 12–00 ಗಂಟೆ, 2–00 ಗಂಟೆ, 3–00 ಗಂಟೆ, ರಾತ್ರಿಯಲ್ಲಿ ಊಟ ತಿಂಡಿ, ತಿನ್ನಬೇಕಾದರೆ, ನಗರದ ಈ ಹೋಟೆಲ್‌ಗಳಿಗೆ ಹೋದರೆ ಆರಾಮವಾಗಿ ತಿಂಡಿ ತಿಂದುಕೊಂಡು ಬರಬಹುದು. ಆದರೆ, ಇಂತಹ ಹೋಟೆಲ್‌ಗಳಿಗೆ ಶ್ರೀಮಂತರು ಮಾತ್ರ ಹೋಗಬಹುದಾಗಿದೆ. Middle class ನವರು low middle class ನವರು...

(ಗೊಂದಲ)

ಅಧ್ಯಕ್ಷರು : – ಇದು ಗೃಹ ಇಲಾಖೆಗೆ ಏರುತ್ತದೆಯಾ ?

ಶ್ರೀ ಆರ್. ರೋಷನ್ ಬೇಗ್ : – ಅದಕ್ಕೇ ಬರುತ್ತಿದ್ದೇನೆ. ಬಹಳ ಗಂಭೀರವಾದ ಪ್ರಶ್ನೆ ಬೆಂಗಳೂರು ನಗರದಲ್ಲಿ ಹಲವಾರು ಆಸ್ಪತ್ರೆಗಳು ಇವೆ. ವಿಕ್ಟೋರಿಯಾ ಆಸ್ಪತ್ರೆಗಳು, ಮಿಂಟೋ ಆಸ್ಪತ್ರೆ, ವಾಣಿವಿಲಾಸ್ ಆಸ್ಪತ್ರೆ, ಸುತ್ತಮುತ್ತ ಅಲ್ಲಿ ರಾತ್ರಿ ಸಮಯದಲ್ಲಿ ಊಟ ಮಾಡಬೇಕಾದರೆ ಒಂದು ಲೋಟ ಹಾಲು ಸಿಗುವುದಿಲ್ಲ. ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಶಿವಾಜಿನಗರ ಬಸ್ ಸ್ಟ್ಯಾಂಡ್ ಆಗಲಿ, ಮೆಜೆಸ್ಟಿಕ್ ಬಳಿ ಸ್ಟ್ಯಾಂಡ್ ಆಗಲಿ, ಐ.ಟಿ.ಬಿ.ಟಿ. ಸೆಂಟರ್ ಬಳಿಯ ವೈಟ್‌ಫೀಲ್ಡ್ ಐ.ಟಿ.ಪಿ.ಎಲ್. ಎಲೆಕ್ಟ್ರಾನಿಕ್ ಸಿಟಿ ಆಗಲಿ, ಇಂಥ ಕಡೆ ಇರುವ ಹೋಟೆಲ್‌ಗಳನ್ನು ರಾತ್ರಿ ಸಮಯದಲ್ಲಿ open ಮಾಡುವುದಕ್ಕೆ ಬಿಡಿ. ಉದಾಹರಣೆಗೆ ಚಿಕ್ಕಪೇಟೆಯಲ್ಲಿ ಒಳ್ಳೆಯ ಇಡ್ಲಿ. ದೋಸಾ cheap rate ನಲ್ಲಿ ಸಿಗುತ್ತದೆ. ಅಲ್ಲಿಗೆ ರಾತ್ರಿ 11.30 ಗಂಟೆಗೆ ಪೊಲೀಸರು ಹೋಗಿ ಗಲಾಟೆ ಮಾಡಿ ಅಂಗಡಿಗಳನ್ನು ಮುಚ್ಚಿಸಿಬಿಡುತ್ತಾರೆ. 4–00 ಗಂಟೆಯವರೆಗೆ open ಮಾಡಿದರೆ ಏನು ಪ್ರಯೋಜನ ? ಪೈನ್ಸಾರ್‌ಗಳು open ಇರಬಹುದು. ಆದರೆ ಇವುಗಳನ್ನು open ಮಾಡುವುದಕ್ಕೆ ಏನು ತೊಂದರೆ ?

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) : – ತಾವು ಗೃಹಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಆಹಾರ ಮತ್ತು ನಾಗರಿಕ ಪೂರೈಕೆ ಒಳಗಡೆ ಹೋಟೆಲ್‌ಗಳು ಬರುವುದಿಲ್ಲ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ : – ನಿಮ್ಮನ್ನು ನಾನು ಕೇಳುತ್ತಿಲ್ಲ. ಸರ್ಕಾರವನ್ನು ನಾವು ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಜಿ.ಎನ್. ಜೀವರಾಜ್ : – ತಾವು, ನಮ್ಮ ಇಲಾಖೆಗೆ ಪ್ರಶ್ನೆಯನ್ನು ಕೇಳಿದ್ದೀರೆಂದು ನಮ್ಮ ಇಲಾಖೆಯಿಂದ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ : – ನಿಮ್ಮ ಇಲಾಖೆ ಬಗ್ಗೆ ಅಲ್ಲ. ಇದು ಪೊಲೀಸರು ಮಾಡುತ್ತಿರುವ ಅತ್ಯಾಚಾರ, ಹೋಟೆಲ್‌ಗಳನ್ನು ಬಂದ್ ಮಾಡುವುದು ಪೊಲೀಸಿನವರು. ನಿಮ್ಮ ಇಲಾಖೆ ಬಗ್ಗೆ ಮಾತನಾಡುತ್ತಿಲ್ಲ. ಸರ್ಕಾರಕ್ಕೆ ನಾನು ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : – ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ರೋಷನ್ ಬೇಗ್ ಅವರು ಎತ್ತಿರುವಂಥ ಈ ಪ್ರಶ್ನೆಗೆ ಇವತ್ತು ಕೇಂದ್ರ ಸರ್ಕಾರ ಒಂದು ಕಾನೂನನ್ನು ಜಾರಿ ಮಾಡಿದೆ. Shops Establishment Act ನಲ್ಲಿ ಕೆಲವೊಂದು ವಲಯಗಳಲ್ಲಿ 24 ಗಂಟೆ ಕಾರ್ಯನಿರ್ವಹಿಸುವಂಥ ಕಾಯಿದೆಯನ್ನು ಜಾರಿ ಮಾಡಿದೆ. ರಾಜ್ಯ ಸರ್ಕಾರವು ಆ ಕಾಯಿದೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಪ್ರವಾಸಿಗರ ಒಂದು ತಾಣವಾಗಿದ್ದು, ಬೇರೆ ಬೇರೆ ಕಡೆಯಿಂದ ಬೆಂಗಳೂರು ನಗರಕ್ಕೆ ಅನೇಕ ಜನಸಮೂಹ ಬರುವಂಥ ಸಂದರ್ಭದಲ್ಲಿ ಇಲ್ಲಿ ಏನಾಗುತ್ತದೆಂದರೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಂಥ ದೃಷ್ಟಿ ಇಟ್ಟುಕೊಂಡು, ಈ ಅಪರಾಧಗಳನ್ನು ತಡೆಯುವ ದೃಷ್ಟಿ ಇಟ್ಟುಕೊಂಡು ಇಂಥ ಚಟುವಟಿಕೆಗೆ ಅವಕಾಶ ಮಾಡಿಕೊಟ್ಟಿಲ್ಲವೆಂದರೆ, ಬಹಳ ಕಷ್ಟವಾಗುತ್ತದೆ. ಈಗ ಬಾಂಬೆಯಂಥ ಪ್ರದೇಶದಲ್ಲಿ ಅರ್ಧ ಬಾಂಬೆ ಹಗಲು ಹೊತ್ತು ಕಾರ್ಯನಿರ್ವಹಿಸುತ್ತದೆ. ಅರ್ಧ ಬಾಂಬೆ ರಾತ್ರಿ ಹೊತ್ತು ಕಾರ್ಯನಿರ್ವಹಿಸುವಂಥ ಸನ್ನಿವೇಶವನ್ನು ನಾವು ನೋಡುತ್ತೇವೆ. ಐ.ಟಿ.ಬಿ.ಟಿ. ಕಂಪನಿಗಳು 24 ಗಂಟೆ ಕೆಲಸ ಮಾಡುತ್ತಿದೆ. ಕಾರ್ಖಾನೆಗಳು 24 ಗಂಟೆ ಕೆಲಸ ಮಾಡುತ್ತಿದೆ. ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ, ನಗರ ಪೂರಕ ಬೆಳವಣಿಗೆಯ ಮುನ್ಸೂಚನೆಯನ್ನು ಇಟ್ಟುಕೊಂಡು ಕಾರ್ಯಕ್ರಮವನ್ನು ರೂಪಿಸಬೇಕೆಂದು ನಾನು ಕೇಳಿಕೊಳ್ಳತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : – ಈ ವಿಷಯ ಕುರಿತಂತೆ ವಿವರವಾದ ಉತ್ತರವನ್ನು ಒದಗಿಸಿ ಕೊಡಲಾಗುತ್ತದೆ.

7. ವಿಷಯ : – ಹೆಚ್ಚು ಅಂಕ ಪಡೆದಿರುವ SC/ST ವಿದ್ಯಾರ್ಥಿಗಳನ್ನು ಸಾಮಾನ್ಯ category ಯಲ್ಲಿ ಪರಿಗಣಿಸುವ ಕುರಿತು.

ಶ್ರೀ ಡಾ॥ ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) : – ಸನ್ಮಾನ್ಯ ಅಧ್ಯಕ್ಷರೆ, ಸಿ.ಇ.ಟಿ. ಪರೀಕ್ಷೆಯಲ್ಲಿ SC/ST ಮಕ್ಕಳು ಮೆರಿಟ್‌ನ್ನು ಪಡೆದಿದ್ದರೂ ಅವರನ್ನು ಸಾಮಾನ್ಯ ವರ್ಗದಲ್ಲಿ ಪರಿಗಣಿಸದೆ merit quota ದಲ್ಲಿ